‘ಓಲ್ಡ್ ಸಿಟಿ ಸ್ಟೇಷನ್ ಪೊಲೀಸರು ನಿಮ್ಮದೊಂದು ಫೈಲ್ ಓಪನ್ ಮಾಡಿದ್ದಾರಂತೆ!...’

ನನ್ನ ಫ್ರೆಂಡ್ ಎಸಿಪಿ ದಯಾನಂದ ಲೋಹಾರ್ ಸ್ವಲ್ಪ ಹೊತ್ತಿನ ಮೊದಲು ಫೋನ್ ಮಾಡಿ ಹೇಳಿದ. ಅವನು ನಿಮ್ಮ ಸ್ಟೂಡೆಂಟ್. ಈಗ ಅವನಿಗೆ ಇಲ್ಲಿಗೆ ಟ್ರಾನ್ಸ್‌ಫರ್ ಆಗಿದೆ.

‘ಪ್ರೊ.ಪ್ರಭುದೇವ ಸಾರ್ವಜನಿಕ ಸಭೆಗಳಲ್ಲಿ, ಸಾಹಿತ್ಯದ ಫಂಕ್ಷನ್ನುಗಳಲ್ಲಿ ದೇಶದ ದೊಡ್ಡ ನಾಯಕರನ್ನು ಟೀಕಿಸ್ತಾರೆ. ದೇಶದಲ್ಲಿ ಈಗ ಅಘೋಷಿತ ತುರ್ತುಪರಿಸ್ಥಿತಿ ಇದೆ ಎಂದು ಹೇಳ್ತಾರೆ...’ ಎಂದು ಫೈಲ್‌ನಲ್ಲಿ ರಿಮಾರ್ಕ್ ಮಾಡಿದ್ದಾರಂತೆ! ರೌಡಿಗಳ ಫೈಲ್‌ಗಳನ್ನು ಓಪನ್ ಮಾಡೋ ರೀತಿ.

ಪ್ರೊಫೆಸರ್ ಮೇಲೆ ಕಾನೂನು ಕ್ರಮದ ಅಗತ್ಯವಿದೆ ಎಂದು ಇಂಟೆಲಿಜೆನ್ಸ್‌ನವರು ಶಿಫಾರಸು ಮಾಡಿದ್ದಾರಂತೆ!

‘ಪ್ರೊಫೆಸರ್ ಸರ್‌ಗೆ ಹುಷಾರಾಗಿರೋಕೆ ಹೇಳು. ನಮ್ಮವರು ಕೇಸ್ ಹಾಕಬಹುದು. ಈ ವಯಸ್ಸಲ್ಲಿ ಅವರು ಅರೆಸ್ಟ್ ಆಗೋದು. ಕೋರ್ಟ್‌ಗೆ ಅಲೆಯೋದು ಬೇಡ. ಅದರಿಂದ ನಿಮ್ಮ ಫ್ಯಾಮಿಲಿ ನೆಮ್ಮದಿ ಹಾಳಾಗುತ್ತೆ...’ ಅಂದ.

ಈಗಿರೋ ಎಸ್‌ಪಿಗೆ ಸಾಹಿತಿಗಳು, ಬುದ್ಧಿಜೀವಿಗಳನ್ನು ಕಂಡ್ರೆ ಆಷ್ಟಕ್ಕಷ್ಟೆ ಅನ್ನೋದು ನಿಮಗೂ ಗೊತ್ತಲ್ಲ ಎನ್ನುತ್ತ ಜಯದೇವ ಅಪ್ಪನ ಮುಖ ನೋಡಿದ.

ಮಗನ ಮಾತಿಗೆ ಪ್ರಭುದೇವ ಏನೂ ಹೇಳಲಿಲ್ಲ. ‘ಈಗ ದೇಶದಲ್ಲಿ ಏನಾಗ್ತಿದೆ ಅನ್ನೋದು ನಿಮಗೂ ಗೊತ್ತಿದೆ. ಸಾಹಿತಿಗಳು, ಬುದ್ಧಿಜೀವಿಗಳ ಮೇಲೆ ದೇಶದ್ರೋಹದ ಆರೋಪ ಹೊರಿಸಿ ಅರೆಸ್ಟ್ ಮಾಡಿ ಜೈಲಿಗೆ ಕಳಿಸ್ತಿದ್ದಾರೆ. ವಿಪ್ಲವ ಕವಿ ಬಾಲಮುಕುಂದ ಅರೆಸ್ಟ್ ಆಗಿ ಎರಡು ವರ್ಷಗಳಾದ್ವು. ಇನ್ನೂ ಜೈಲಲ್ಲೇ ಇದ್ದಾರೆ...’ ಎಂದು ಜಯದೇವ ಹೇಳಿದರೂ ಪ್ರಭುದೇವ ಏನೂ ಹೇಳದೆ ಸುಮ್ಮನಿದ್ದರು.

ಪತ್ರಿಕೆಗೆ ಅಂಕಣ ಲೇಖನ ಕಳಿಸಬೇಕು, ಇವತ್ತೇ ಡೆಡ್‌ಲೈನ್ ಎನ್ನುತ್ತ ಕಂಪ್ಯೂಟರ್ ಆನ್ ಮಾಡಿದರು. ಐದಾರು ದಿನಗಳ ಹಿಂದೆ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾಡಿದ್ದ ಭಾಷಣವನ್ನು ಅಂಕಣ ಲೇಖನವಾಗಿ ಬರೆಯಲು ನಿರ್ಧರಿಸಿದ್ದರು. ಆದರೆ ಸಭೆಯಲ್ಲಿ ಏನು ಮಾತನಾಡಿದ್ದೆ ಅನ್ನೋದು ಅವರಿಗೆ ನೆನಪಾಗಲಿಲ್ಲ. ಹೆಂಡತಿ ಬಂದು ಊಟಕ್ಕೆ ಬನ್ನಿ ಎಂದು ಕರೆಯೋವರೆಗೆ ಕಂಪ್ಯೂಟರ್ ಮುಂದೆ ಕೂತೇ ಇದ್ದರು.

ಮರುದಿನ ಬೆಳಗ್ಗೆ ವಾಕಿಂಗ್ ಹೋಗಿ ಬರ್ತೀನಿ ಎಂದು ಹೆಂಡತಿಗೆ ಹೇಳಿ ಮನೆಯಿಂದ ಹೊರಟರು. ನಿತ್ಯ ಓಡಾಡುತ್ತಿದ್ದ

